**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಹಾಸನ**

**ಎಸ್.ಸಿ .ನಂಃ 83/ 2019**

**ಚಾಸಾ-9, ಪ್ರಾಸಾ-7**

| | | |
|---|---|---|
| ಸಾಕ್ಷಿದಾರರ ಹೆಸರು | : | ಅಶೋಕ |
| ತಂದೆಯ ಹೆಸರು | : | ವೀರಭದ್ರಯ್ಯ |
| ವಯಸ್ಸು | : | 44 ವರ್ಷ |
| ಉದ್ಯೋಗ | : | ಕೂಲಿ ಕೆಲಸ |
| ವಾಸಸ್ಥಳ | : | ಕಡದರವಳ್ಳಿ. |

**ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಿದ ದಿನಾಂಕಃ 19.09.2025.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ-8 ನನ್ನ ಸಂಬಂದಿಕರು.

2. ಈ ನೋಡುತ್ತಿರುವ ಎರಡು ದಾಖಲೆಗಳಲ್ಲಿ ನನ್ನ ಸಹಿಗಳು ಕಂಡುಬರುತ್ತವೆ. ಸದರಿ ದಾಖಲೆಗಳ ದೃಡೀಕೃತ ನಕಲು ಪ್ರತಿಗಳು ನ್ಯಾಯಾಲಯದ ಕಡತದಲ್ಲಿ ಇದ್ದು, ಅವುಗಳಲ್ಲಿನ ಒಂದು ದಾಖಲೆಯು ಬೈಕ್ ಅಮಾನತು ಮಹಜರ ಕ್ರಮವಾಗಿದ್ದು, ಅದು ಈಗಾಗಲೇ ನಿಪಿ-9 ಎಂದು ಗುರುತಿಸಲಾಗಿದ್ದು, ಮತ್ತೊಂದು ದಾಖಲೆಯು ಒಂದು ಬೈಕ್ ಅಮಾನತು ಮಹಜರ ಕ್ರಮವಾಗಿದ್ದು, ಅದು ಈಗಾಗಲೇ ನಿಪಿ-10 ಎಂದು ಗುರುತಿಸಲಾಗಿರುತ್ತದೆ.

3. ನಿಪಿ-9 ಹಾಗೂ 10 ರ ದಾಖಲೆಗಳಲ್ಲಿನ ನನ್ನ ಸಹಿಯನ್ನು ನಾನು ಸುಮಾರು 05 ವರ್ಷದ ಹಿಂದೆ ಹಾಸನ ನಗರದ ವೃತ್ತ ನಿರೀಕ್ಷಕರ ಕಚೇರಿಗೆ ನನ್ನ ಸ್ವಂತ ಕೆಲಸಕ್ಕೆಂದು ಹೋದಂತಹ ಸಂದರ್ಭದಲ್ಲಿ ಪೋಲಿಸರ ಕೋರಿಕೆಯ ಮೇರೆಗೆ ಸಹಿಗಳನ್ನು ಮಾಡಿರುತ್ತೇನೆ. ನ್ಯಾಯಾಲಯದ ಮುಂದಿರುವ 1 ರಿಂದ 4 ಹಾಗೂ 6 ನೇ ಆರೋಪಿತರನ್ನು ನಾನು ಯಾವತ್ತೂ ನೋಡಿಲ್ಲ. ನನ್ನ ಸಮಕ್ಷಮ ಪೋಲಿಸರು ಕೃತ್ಯಕ್ಕೆ ಬಳಸಿದ್ದು ಎನ್ನಲಾದ ಯಾವುದೇ ವಾಹನವನ್ನು ಅಮಾನತುಪಡಿಸಿಕೊಂಡಿಲ್ಲ. ಈ ಸಂಬಂದ ನಾನು ಪೋಲಿಸರಿಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ.

(ಈ ಸಂದರ್ಭದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ, ದಾಖಲೆಗಳನ್ನು ಪರಿಶೀಲಿಸಿ, ಪಾಟೀಸವಾಲಿಗೆ ಅನುಮತಿ ನೀಡಿದೆ)

**ಪಾಟೀಸವಾಲುಃ ಸರ್ಕಾರಿ ಅಭಿಯೋಜಕರಿಂದಃ**

4. ದಿಃ 24.11.2017 ರಂದು ನಾನು ಪೋಲಿಸರಿಗೆ ನೀಡಿದ ಹೇಳಿಕೆಯಲ್ಲಿ ನನ್ನನ್ನು ಚಾಸಾ-22 ರವರು ಆರೋಪಿತರಿಂದ ವಾಹನಗಳನ್ನು ಅಮಾನತುಪಡಿಸಿಕೊಳ್ಳುವ ಸಂಬಂದ ಪಂಚ ಸಾಕ್ಷಿದಾರರಾಗಿ ಸಹಕರಿಸಬೇಕೆಂದು ಕೋರಿಕೊಂಡಿದ್ದರ ಮೇರೆಗೆ ನಾನು ಒಪ್ಪಿಕೊಂಡಿದ್ದು, 1 ರಿಂದ 3 ನೇ ಆರೋಪಿತರು ಹಾಜರುಪಡಿಸಿದ್ದ ಒಂದು ಬೂದಿ ಬಣ್ಣದ ನಂಬರು ರಹಿತ ಟಿ.ವಿ.ಎಸ್ ಅಪಾಚಿ ದ್ವಿಚಕ್ರ ವಾಹನವನ್ನು ಹಾಜರುಪಡಿಸಿದಾಗ ಅದನ್ನು ನನ್ನ ಸಮಕ್ಷಮ ಅಮಾನತುಪಡಿಸಿಕೊಂಡು ನಿಪಿ-10 ರಂತೆ ಮಹಜರ ಕ್ರಮವನ್ನು ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ ಮತ್ತು ಅದೇ ದಿನ 4 ರಿಂದ 6 ನೇ ಆರೋಪಿತರು ಹಾಜರುಪಡಿಸಿದ KA-01-EH-4940 ಬಜಾಜ್ ಪಲ್ಸರ ದ್ವಿಚಕ್ರ ವಾಹನವನ್ನು ನನ್ನ ಸಮಕ್ಷಮ ನಿಪಿ-9 ರಂತೆ ಅಮಾನತುಪಡಿಸಿಕೊಂಡು ನನ್ನ ಸಹಿಯನ್ನು ಸ್ಥಳದಲ್ಲೇ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಈ ಎಲ್ಲಾ ವಿದ್ಯಮಾನಗಳ ಬಗ್ಗೆ ತಿಳಿದುಕೊಂಡು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ನಿಪಿ-9 ಹಾಗೂ 10 ರ ದಾಖಲೆಗಳಲ್ಲಿನ ವಿಚಾರಗಳನ್ನು ತಿಳಿದುಕೊಂಡು ಸಹಿ ಮಾಡಿದ್ದರೂ ಸಹ ಹಾಗೂ ನಿಪಿ-12 ರಂತೆ ಈ ಸಂಬಂದ ಹೇಳಿಕೆ ನೀಡಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲೆಂದು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ 1 ನೇ ಆರೋಪಿ ಪರ ಶ್ರೀ. ಹೆಚ್.ಬಿ.ಎಸ್ ವಕೀಲರಿಂದಃ**

ಆರೋಪಿ ಪರ ಯಾವುದೇ ಪಾಟೀಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಪಾಟೀಸವಾಲುಃ 2 ಹಾಗೂ 5 ನೇ ಆರೋಪಿತರ ಪರ ಎಸ್.ಎನ್ ವಕೀಲರಿಂದ ಶ್ರೀ ಬಿ.ಸಿ ವಕೀಲರ ಪರವಾಗಿಃ**

ಆರೋಪಿಗಳ ಪರ ಯಾವುದೇ ಪಾಟೀಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಪಾಟೀಸವಾಲುಃ 3 ನೇ ಆರೋಪಿ ಪರ ಶ್ರೀ. ಹೆಚ್.ಜೆ.ಆರ್ ವಕೀಲರಿಂದಃ**

ಆರೋಪಿ ಪರ ಯಾವುದೇ ಪಾಟೀಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಪಾಟೀಸವಾಲುಃ 4 ಹಾಗೂ 6 ನೇ ಆರೋಪಿತರ ಪರ ಶ್ರೀ. ಟಿ.ಎಸ್.ಎಸ್ ವಕೀಲರಿಂದಃ**

ಆರೋಪಿತರ ಪರ ಯಾವುದೇ ಪಾಟೀಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆಃ** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಸಮಕ್ಷಮ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ

3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,
ಹಾಸನ.